ಸಾಕ್ಷಿಯನ್ನು ದಿನಾಂಕಃ 08.11.2017 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀಃ ಬಿಎಲ್‌ಟಿ ಃ ವಾದಿ ಪರ ವಕೀಲರಿಂದಃ

ನಿಡಿ-1ರ ಪ್ರಕಾರ ದಕ್ಷಿಣಕ್ಕೆ ರಸ್ತೆ ಮತ್ತು ಸುಬ್ಬೇಗೌಡರವರ ಜಮೀನು ಎಂದು ಬರೆಸಿರುತ್ತೇನೆ. ಸದರಿ ಸುಬ್ಬೇಗೌಡರವರು ಮೃತಪಟ್ಟಿರುತ್ತಾರೆ. ಅವರ ಮಕ್ಕಳ ಹೆಸರು ನಾಗೇಶ ಸುಬ್ರಹ್ಮಣ್ಯ, ಮತ್ತು ಶಂಕರೇಗೌಡರವರಾಗಿರುತ್ತಾರೆ. ಸದರಿ ಸುಬ್ಬೇಗೌಡರವರ ಮಗ ನಾಗೇಶ್‌ರವರ ಹೆಸರಿನಲ್ಲಿ ಸ.ನಂ.173ಃ5 ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಸ.ನಂ.218ರ ನಮ್ಮ ಜಮೀನಿನ ದಕ್ಷಿಣಕ್ಕೆ ವಾದಿಗಳ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಗ್ರಾಮ ಠಾಣಾ ನಮ್ಮ ಜಮೀನಿನ ಪೂರ್ವಕ್ಕೂ ಅಲ್ಲ ಮತ್ತು ಪಶ್ಚಿಮಕ್ಕೂ ಅಲ್ಲದ ಮಧ್ಯೆದಲ್ಲಿ ಬರುತ್ತದೆ. ರಾಜೀವ್‌ಗಾಂಧಿ ನಿಗಮ ನಿಯಮಿತರವರಾಗಲೀ ಮತ್ತು ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳಾಗಲೀ ನಮ್ಮ ಊರಿನಲ್ಲಿ ನಿವೇಶನಗಳನ್ನು ಮಾಡಿ ಹಂಚಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸ.ನಂ.218ರಲ್ಲಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ಏನೇ ನಿರ್ಮಾಣ ಮಾಡಿದರೂ ನನಗೆ ಸೇರುವುದಿಲ್ಲ ಎಂದರೆ ಸರಿ. ವಾದಿಗಳು ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸ. ನಂ.218ರಲ್ಲಿ ನ್ಯಾಯಾಲಯದ ವತಿಯಿಂದ ಸರ್ವೆ ಕಾರ್ಯ ಮಾಡಿಸಲು ನನಗೇನೂ ಅಭ್ಯಂತರವಿರುವುದಿಲ್ಲ ಎಂದರೆ ಸರಿ.

ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ನಿಡಿ-1ರಂತೆ ದಾವಾ ಸ್ವತ್ತು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ರಾಜೀವ್‌ಗಾಂಧಿ ನಿಗಮ ನಿಯಮಿತ ಮತ್ತು ತಾಲ್ಲೂಕು ಪಂಚಾಯಿತಿ ಮತ್ತು ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ವಾದಿಗಳ ಆಸ್ತಿಯಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆಯ ಆದೇಶ ಇದ್ದರೂ ಸಹ ಮನೆಗಳನ್ನು ಹಂಚಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸ.ನಂ.218ರ ಜಮೀನಿನಲ್ಲಿ ಕೊತ್ತೇಗಾಲ ಗ್ರಾಮದವರು ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಜಾಗದಲ್ಲಿ ಯಾವುದೇ ರೀತಿಯ ತಳಪಾಯ ಮತ್ತು ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ. ಸ.ನಂ.218ರ ಜಮೀನಿನಲ್ಲಿ ಯಾವುದೇ ಅಕ್ರಮ ಕಟ್ಟಡ ನಿರ್ಮಾಣ ಮತ್ತು ಇತರೇ ಕೆಲಸಗಳು ಮಾಡಿದರೆ ಅದು ನಮಗೆ ಸಂಬಂಧವಿರುವುದಿಲ್ಲ. ಸ.ನಂ.218ರಲ್ಲಿ ಪೂರ್ವ ಜಮೀನಿನ 6 ಎಕರೆ 3 ಗುಂಟೆ ಜಮೀನಿನ ಪೈಕಿ ದಕ್ಷಿಣ ಭಾಗದ 1 ಎಕರೆ 8 ಗುಂಟೆ ಜಮೀನನ್ನು ಕಳೆದು ಇನ್ನು ಉಳಿದ ಉತ್ತರ ಭಾಗಕ್ಕೆ ಸೇರಿದ ಜಮೀನು ಮಾತ್ರ ನನಗೆ ಸೇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ಶಾಮೀಲಾಗಿ ವಾದಿಗೆ

ಸೇರಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಎಕರೆ 3 ಗುಂಟೆಯ ದಾವಾ ಆಸ್ತಿಯಲ್ಲಿ ವಾದಿಗಳೇ ಸಂಪೂರ್ಣ ಹಕ್ಕುದಾರರು ಮತ್ತು ಸ್ವಾಧೀನಾನುಬವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಹೆಚ್ಚುವರಿ ಸಿಜೆ ಮತ್ತು ಜೆ.ಎಂ.ಎಫ್.ಸಿ,
ಹೆಚ್.ಡಿ.ಕೋಟೆ.